ವಾಜಪೇಯಿ ಆರೋಗ್ಯಶ್ರೀ ಯೋಜನೆಯ ಅನುಷ್ಠಾನ
(220): 360

ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಅನುಷ್ಠಾನದ ಕುರಿತಾದ ವಿವರಗಳೇನು?

ಆ) ಈ ಯೋಜನೆಯ ಸೌಲಭ್ಯಗಳನ್ನು ಪಡೆಯಲು ನಿಗಧಿಪಡಿಸಲಾಗಿರುವ ಮಾನದಂಡಗಳೇನು?

ಇ) ಕಠಿಣ ಅರ್ಹತಾ ನಿಯಮಗಳನ್ನು ಸಡಿಲಿಸಲಾಗಿದೆಯೇ?

ಈ) ಬಡವರು ಅರ್ಹತಾ ದಾಖಲೆಗಳನ್ನು ಪಡೆಯಲು ಸುಲಭಸಾಧ್ಯ ನಿಯಮಗಳನ್ನು ರಚಿಸಿ ಅನುಕೂಲ ಮಾಡಿಕೊಡಲಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್
ಮುಖ್ಯಮಂತ್ರಿಯವರು

ಅ) ಬಿಬಿಎಂಪಿ ವ್ಯಾಪ್ತಿಯಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಈ ಕೆಳಕಂಡ ಫಲಾನುಭವಿಗಳಿಗೆ ಅನುಷಾನಗೊಳಿಸಲಾಗಿರುತ್ತದೆ.

1. ಕೊಳಚೆ ಪ್ರದೇಶದ ನಿವಾಸಿಗಳು
2. ಆಟೋರಿಕ್ಷಾ ಚಾಲಕರುಗಳು
3. ಸಫಾಯಿ ಕರ್ಮಚಾರಿಗಳು
4. ಪೌರಕಾರ್ಮಿಕರು,
5. ವಿಧವಾ / ವಿಕಲ ಚೇತನರು

ಆ) ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ನಿಗದಿಪಡಿಸಲಾದ ಮಾನದಂಡಗಳು:

1. ಬಿಪಿಎಲ್ ಕಾರ್ಡು ಹೊಂದಿರಬೇಕು.
2. ಪೌರಕಾರ್ಮಿಕರು ಗುತ್ತಿಗೆ ಗುರುತಿನ ಕಾರ್ಡನ್ನು ಹೊಂದಿರಬೇಕು.
3. ಆಟೋ ರಿಕ್ಷಾ ಚಾಲಕರುಗಳು ಆರ್.ಟಿ.ಓ ಪರವಾನಗಿಯನ್ನು ಹೊಂದಿರಬೇಕು.

4. ವಿಧವಾ ವೇತನ ಪಡೆಯುವವರು ಸರ್ಕಾರದ ವಿಧವಾ ವೇತನ ಪ್ರಮಾಣ ಪತ್ರವನ್ನು ಹೊಂದಿರಬೇಕು.
5. ವಿಕಲಚೇತನರು ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರಬೇಕು.
6. ಸಫಾಯಿ ಕರ್ಮಚಾರಿಗಳು ಬಿಬಿಎಂಪಿ ಗುರುತಿನ ಚೀಟಿಯನ್ನು ಹೊಂದಿರಬೇಕು.
7. ಕಾಳಜಿ ಪ್ರದೇಶದ ನಿವಾಸಿಗಳ ಹಕ್ಕು ಪತ್ರವನ್ನು ಮತದಾರ ಗುರುತಿಸಿ ಚೀಟಿಯನ್ನು ಹೊಂದಿರಬೇಕು.

ಇ) ಸಂಧರ್ಭಕ್ಕನುಸಾರವಾಗಿ ಕಠಿಣ ನಿಯಮಗಳನ್ನು ಸಡಿಲಿಸಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಈ) ಬಡವರಿಗೆ ಸುಲಭ ಸಾಧ್ಯ ನಿಯಮಗಳನ್ನು ರಚಿಸಿ ಅನುಕೂಲ ಮಾಡಿಕೊಡಲಾಗಿದೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಕಸ ವಿಲೇವಾರಿ
(222): 362

ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಹೋಟೆಲ್‌ಗಳು, ಮಾಲ್‌ಗಳು, ಆಸ್ಪತ್ರೆಗಳು ಸೇರಿದಂತೆ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿಗಾಗಿ ಮಹಾನಗರ ಸಭೆಯವರು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಆ) ಈ ತ್ಯಾಜ್ಯ ಮೂಲಗಳಿಗೆ ವಿಧಿಸಲಾಗಿರುವ ಕಾನೂನು ನಿಯಮಗಳನ್ನು ಪಾಲಿಸಲಾಗುತ್ತಿದೆಯೇ?ಉಲ್ಲಂಘನೆಯಾದ ಪ್ರಕರಣಗಳನ್ನು ಗುರುತಿಸಿ ಜರುಗಿಸಿದ ಕ್ರಮ-ಗಳೇನು?

ಇ) ಮನೆಗಳಲ್ಲಿನ ತ್ಯಾಜ್ಯ ವಿಂಗಡಣೆಗೆ ಸಾರ್ವಜನಿಕರಲ್ಲಿ ಅರಿವು ನೀಡುವ ಕುರಿತು ಕೈಗೊಂಡ ಕ್ರಮಗಳೇನು?

ಈ) ಕಸ ವಿಲೇವಾರಿಗಾಗಿ ಗುರುತಿಸಿದ ಸ್ಥಳಗಳು ಮತ್ತು ಕೈಗೊಂಡ ವೈಜ್ಞಾನಿಕ ಕ್ರಮಗಳೇನು?